O.S.No.339/2017
PW -1

ದಿನಾಂಕ 19/10/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

ಮುಖ್ಯ ವಿಚಾರಣೆ :- ಶ್ರೀ ಡಿ.ಕೆ.ಟಿ. ವಾದಿ ಪರ ವಕೀಲರಿಂದ

ವಾದಿ ಪರ ವಕೀಲರು ಒಂದು ಮೆಮೋ ಸಲ್ಲಿಸಿ ದಿ. 07/03/2018 ರಂದು ವಾದಿಯ ಮುಖ್ಯ ವಿಚಾರಣೆಯನ್ನು ಮಾಡಿದ್ದು, ಸದರಿ ಮುಖ್ಯ ವಿಚಾರಣೆಯನ್ನು ವಿವಾದಾಂಶ ರೂಪಿಸಿದ ನಂತರ ಮುಖ್ಯ ವಿಚಾರಣೆ ಎಂದು ಪರಿಗಣಿಸುವಂತೆ ಕೋರಿದ ಮೇರೆಗೆ ದಿ.07/03/2018 ರ ವಾದಿಯ ಮುಖ್ಯ ವಿಚಾರಣೆಯನ್ನು ವಿವಾದಾಂಶಗಳು ರೂಪಿಸಿದ ನಂತರ ಮುಖ್ಯ ವಿಚಾರಣೆಯನ್ನು ಪರಿಗಣಿಸಲಾಯಿತು ಹಾಗೂ ವಾದಿ ಪರ ವಕೀಲರು ವಾದಿಯ ಮುಂದುವರೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ ಸಾಕ್ಷಿಯು ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ಓದಿ ತಿಳಿದು ಕೊಂಡಿದ್ದು ಅದಕ್ಕೆ ತನ್ನ ಸಹಿ ಮಾಡಿರುತ್ತಾರೆ

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಡಿ.ಕೆ.ಟಿ ವಾದಿ ಪರ ವಕೀಲರಿಂದ**

ನಾನು ಈ ದಿನ ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು, ಸ್ವತ್ತಿನ ಸಂಖ್ಯೆ-414/2022 ಇದರ ನಮೂನೆ-9 ರ ಪ್ರತಿ ಹಾಜರುಡಿಸಿದ್ದು ಅದನ್ನು ನಿಪಿ-10 ಎಂದು, ತಹಸೀಲ್ದಾರ್ ಕಛೇರಿ ರವರು ನೀಡಿದ ನಕಾಶೆ ಹಾಜರುಡಿಸಿದ್ದು ಅದನ್ನು ನಿಪಿ-11 ಎಂದು, ಮೂಲ ದಾವೆ ನಂ-474/2016 ರಲ್ಲಿ ಕಮಿಷನರ್ ವರದಿಯ ದೃಢೀಕೃತ ಪ್ರತಿ ಹಾಜರುಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

*ಪಾಟೀ ಸವಾಲು - ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು , ಸಮಯ ನೀಡಲಾಯಿತು.*

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ